ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 19

ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ

ಉತ್ತರಿಸುವ ದಿನಾಂಕ : 21-07-2008

ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರಗಳು
ಅ.	ನಬಾರ್ಡ್ ಯೋಜನೆಯಡಿ ರಾಜ್ಯದ ಬಯಲು ಪ್ರದೇಶದಲ್ಲಿ ಹೊಸದಾಗಿ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?	ಭಾರಿ ಮತ್ತು ಮಧ್ಯಮ ನೀರಾವರಿಗೆ ಸಂಬಂಧಿಸಿದಂತೆ ನಬಾರ್ಡ್ ಯೋಜನೆಯಡಿ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.
ಆ.	ಹಾಗಿದ್ದಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ನಿರ್ಮಿಸಲಾಗುವದು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.
ಇ.	ತುಂಗಭದ್ರಾ ನೀರಿನ ಲಭ್ಯತೆಯಿರುವ ಪ್ರದೇಶಗಳಲ್ಲಿ ಹೊಸದಾಗಿ ಏತ ನೀರಾವರಿ ಯೋಜನೆ ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದಲ್ಲಿ ಯಾವ ತಾಲ್ಲೂಕುಗಳಲ್ಲಿ ನಿರ್ಮಾಣ ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)	ತುಂಗಭದ್ರಾ ನೀರಿನ ಲಭ್ಯತೆ ಇರುವ ಪ್ರದೇಶದಲ್ಲಿ ನೂತನ ಏತ ನೀರಾವರಿ ಯೋಜನೆಗಳ ಬಗ್ಗೆ ನಿರ್ಧರಿಸಿಲ್ಲ, ಆದಾಗ್ಯೂ ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಕೊರತೆ ಎದುರಿಸುತ್ತಿರುವ ಕ್ಷೇತ್ರಗಳಿಗೆ ಪೂರಕ ನೀರಾವರಿ ಸೌಲಭ್ಯ ಒದಗಿಸುವ ಏತ ನೀರಾವರಿ ಯೋಜನೆಗಳು ವಿವಿಧ ಹಂತದಲ್ಲಿದೆ. 1. ವೈ ಕಗ್ಗಲ್ ಏತ ನೀರಾವರಿ ಯೋಜನೆ ಬಳ್ಳಾರಿ ತಾ. 2. ಕೆಂಜನ ಗುಡ್ಡ ಏತ ನೀರಾವರಿ ಯೋಜನೆ ಸಿರಗುಪ್ಪಾ ತಾ. 3. ಒಳ ಬಳ್ಳಾರಿ ಏತ ನೀರಾವರಿ ಯೋಜನೆ ಸಿಂಧನೂರು ತಾ.
ಈ.	ತುಂಗಭದ್ರಾ ಅಣೆಕಟ್ಟು ನಿರ್ಮಾಣ ಕಾದಲ್ಲಿ ಕೊಪ್ಪಳ ತಾಲ್ಲೂಕಿನ 33 ಗ್ರಾಮಗಳ ರೈತರು ಭೂಮಿ ಮತ್ತು ವಸತಿಯನ್ನು ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ.

ಉ.	ಬಂದಿದ್ದಲ್ಲಿ ಈ ಸಂತ್ರಸ್ತ ರೈತರಿಗೆ ಸರ್ಕಾರ ಯಾವ ರೀತಿ ಪರಿಹಾರ ನೀಡಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಸಂತ್ರಸ್ತ ರೈತರಿಗೆ ತುಂಗಭದ್ರಾ ಮಂಡಳಿಯ ವತಿಯಿಂದ 1945ರಿಂದ 1958 ರ ವರೆಗಿನ ಅವಧಿಯಲ್ಲಿ ಪರಿಹಾರ ನೀಡಲಾಗಿದ್ದು, ವಿವರ ಕೆಳಗಿನಂತಿದೆ. ತುಂಗಭದ್ರಾ ಯೋಜನೆಯ ಎಡಭಾಗದಲ್ಲಿ 40 ಹಳ್ಳಿಗಳು, ನೀರಿನಿಂದ ತೊಂದರೆಗೊಳಪಟ್ಟಿರುತ್ತವೆ. ಅದರಲ್ಲಿ 10 ಹಳ್ಳಿಗಳು ಮತ್ತು ಹೊಲಗಳು ಪೂರ್ಣ ಮುಳುಗಡೆಯಾಗಿರುತ್ತವೆ. 24 ಹಳ್ಳಿಗಳು ಪೂರ್ಣ ಮುಳುಗಡೆಯಾಗಿದ್ದು ಅವುಗಳ ಹೊಲಗಳು ಭಾಗಶಃ ಮುಳುಗಡೆಯಾಗಿರುತ್ತವೆ. ಆರು ಹಳ್ಳಿಗಳ ಹೊಲಗಳು ಭಾಗಶಃ ಮಾತ್ರ ಮುಳುಗಡೆಯಾಗಿರುತ್ತವೆ. ಮುಳುಗಡೆಯಾದ ಹಳ್ಳಿಗಳ ಜನರ ಅಭಿಪ್ರಾಯವನ್ನು ಪರಿಗಣಿಸಿ ಪುನರ್‌ವಸತಿ ಕೇಂದ್ರಗಳನ್ನು ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಒಟ್ಟು 31 ಪುನರ್‌ವಸತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಿರಾಶ್ರಿತರಾದ ಕುಟುಂಬಗಳಿವಗ (1) 50 ಅಡಿ * 100 ಅಡಿ (2) 40 ಅಡಿ * 80 ಅಡಿ (3) 30 ಅಡಿ * 60 ಅಡಿ ನಿವೇಶನಗಳನ್ನು ನೀಡಲಾಗಿದೆ. (at free of cost) ಮುಳುಗಡೆಯಾದ ಮನೆಗಳು ಹಾಗೂ ಹೊಲಗಳಿಗೆ ಪರಿಹಾರವನ್ನು 2 ಸಹಕಾರ ಸಂಘಗಳ ಮೂಲಕ ನೀಡಲಾಗಿದೆ. ಬಾದಿತವಾದ ಕುಟುಂಬಗಳ ಪುನರ್‌ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲು ಸರ್ಕಾರದಿಂದ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಪುನರ್‌ವಸತಿ ಕೇಂದ್ರಗಳಲ್ಲಿ ರಸ್ತೆಗಳು ಮತ್ತು ಅಪ್ರೋಚ್ ರಸ್ತೆಗಳನ್ನು ನಿರ್ಮಿಸಲಾಗಿದೆ. 31 ಪುನರ್ ವಸತಿ ಕೇಂದ್ರಗಳಲ್ಲಿ 51 ಭಾವಿಗಳ ಮುಖಾಂತರ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಪುನರ್‌ವಸತಿ ಕೇಂದ್ರಗಳಲ್ಲಿ ಶಾಲೆಗಳನ್ನು ನಿರ್ಮಿಸಲಾಗಿದೆ. 17 ಹಳ್ಳಿಗಳಲ್ಲಿ ಪಂಚಾಯತ್ ಹಾಲ್ / ಚಾವಡಿಯನ್ನು ನಿರ್ಮಿಸಲಾಗಿದೆ. ಮುಳುಗಡೆಯಾದ ಧಾರ್ಮಿಕ

		ಸ್ಥಳಗಳನ್ನು ಪುನರ್‌ವಸತಿ ಕೇಂದ್ರಗಳಲ್ಲಿ ನಿರ್ಮಿಸಲಾಗಿದೆ. ಮುಳುಗಡೆಯಾದ ಅತಿ ದೊಡ್ಡ ಹಳ್ಳಿ ಕಾತರಕಿಯನ್ನು 2 ಕೇಂದ್ರಗಳ ಪುನರ್‌ವಸತಿ ಕೇಂದ್ರಗಳಿಗೆ ಸ್ಥಳಾಂತರಿಸ ಲಾಗಿದ್ದು, ಸದರಿ ಹಳ್ಳಿಯಲ್ಲಿ ಹೆಚ್ಚಿನ ನೇಕಾರರು ಇದ್ದುದರಿಂದ ಇದಕ್ಕಾಗಿ ಭಾಗ್ಯನಗರದಲ್ಲಿ ಹೊಸದಾಗಿ ನೇಕಾರರ ಕಾಲೋನಿಯನ್ನು ನಿರ್ಮಿಸಿದ್ದು 500 ಜನ ನೇಕಾರರನ್ನು ಸದರಿ ಕೇಂದ್ರಕ್ಕೆ ಸ್ಥಳಾಂತರಿಸ ಲಾಗಿದೆ. ಈ ಕೇಂದ್ರದಲ್ಲಿ 200 ಮನೆಗಳನ್ನು ನಿರ್ಮಿಸಲು Bagyanagar Rural uplift Co-operative Societyಗೆ ಮುಂಗಡ ಸಾಲವನ್ನು ಸರ್ಕಾರದಿಂದ ನೀಡಿ ವಸತಿ ಹಾಗೂ ಯಾವುದೇ ಆದಾಯ ಮೂಲವಿಲ್ಲದ ನೇಕಾರರಿಗೆ ನೆರವು ನೀಡಲಾಗಿದೆ.